ವಿತ್ತ ಸಂಚಿಕೆ
MARCH 2025

# INSPIRE INDIA




ಶರಣ್ ಪಾಟೀಲ್
ಆರ್ಥಿಕ ತಜ್ಞರು

## ಸಲಹೆ ನಮ್ಮದು ಹೂಡಿಕೆ ನಿಮ್ಮದು


INSPIRE INDIA WEALTH PRIVATE LTD. @ 65, 'Surasa Enclave' 1st floor, Puttanna Road, Gandhi Bazar Basvanagudi, Bengaluru 560004, Ph: +91 8042129917, 9035414414. Mail: info@inspireindiafs.com Website: www.inspireindiafs.com




ಮಹಿಳೆ ಸ್ವತಂತ್ರಳಾಗಿ ಬದುಕಬೇಕು ಎಂದು ನಿರ್ಧಾರ ಮಾಡಿದರೆ ಆಕೆ ಹಠಕ್ಕೆ ಬಿದ್ದು ಗಳಿಸಬೇಕು.
–ವಂದನಾ ಲೂಥ್ರಾ



ಜೀವನಪೂರ್ತಿ ವಿದ್ಯಾರ್ಥಿ, ಹೊಸತನ್ನು ಕಲಿಯುವ ಉತ್ಸಾಹ, ಕುತೂಹಲ. ಯಶಸ್ವೀ ಮನುಷ್ಯನಿಗೆ ಇಷ್ಟಿದ್ದರೆ ಸಾಕು.
–ಇಂದ್ರಾ ನೂಯಿ

ಯಶಸ್ಸನ್ನು ಗಳಿಸಲು ನಿಮ್ಮೊಳಗೊಬ್ಬ ಫೈಟರ್ ಇರಬೇಕು. ಅದಕ್ಕೆ ಲಿಂಗಭೇದವಿಲ್ಲ. ಆತ ಸೋಲಿಗೂ ಸಿದ್ಧನಾಗಿರಬೇಕು.
–ಸುಚಿ ಮುಖರ್ಜಿ



# ಮಧ್ಯಮ ವರ್ಗಕ್ಕೆ ಬಂಪರ್

## 2025ರ ಕೇಂದ್ರ ಬಜೆಟ್ ವಿಶ್ಲೇಷಣೆ



ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿದ 2025ರ ಸಾಲಿನ ಕೇಂದ್ರ ಬಜೆಟ್ ದೇಶದ ಆರ್ಥಿಕತೆಯ ಮೇಲೆ ಗಮನಾರ್ಹ ಪರಿಣಾಮವನ್ನು ಬೀರುತ್ತದೆ. ಹೂಡಿಕೆದಾರರು ಕೂಡ ಇದ–ರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಈ ಬಜೆಟ್ ಅನೇಕ ಅಂಶಗಳ ಮೇಲೆ ಗಮನ ಕೇಂದ್ರೀಕ–ರಿಸುತ್ತದೆ. ಅವುಗಳಲ್ಲಿ; ಆರ್ಥಿಕ ಪ್ರಗತಿಗೆ ವೇಗ ನೀಡುವುದು, ಎಲ್ಲರನ್ನೂ ಒಳಗೊಳ್ಳುವ ಅಭಿವೃದ್ಧಿಗೆ ಉತ್ತೇಜನ, ಖಾಸಗಿ ವಲಯದ ಹೂಡಿಕೆಯನ್ನು ಹೆಚ್ಚಿಸುವುದು, ತೆರಿಗೆ ವಿನಾಯ್ತಿಯ ಮೂಲಕ ಮಧ್ಯಮ ವರ್ಗದವರ ಖರ್ಚುಮಾಡುವ ಶಕ್ತಿಗೆ ಬಲ ನೀಡುವುದು ಇದರಲ್ಲಿ ಸೇರಿದೆ. ಇದು ಮುಂದಿನ ಐದು ವರ್ಷಗಳ ಹಣಕಾಸು ಮಾರ್ಗಸೂಚಿಯನ್ನು ವಿವರಿಸುತ್ತದೆ, ಹಣಕಾಸು ವರ್ಷ 2031ರ ಹೊತ್ತಿಗೆ ಭಾರತದ ಸಾಲವನ್ನು 60ರಿಂದ 70ರಷ್ಟು ಜಿಡಿಪಿ ಅನುಪಾತಕ್ಕೆ ಇಳಿಸುವ ಗುರಿ ಹೊಂದಲಾಗಿದೆ. ಬಜೆಟ್‌ನ ಪ್ರಮುಖಾಂಶಗಳ ಬಗ್ಗೆ ಗಮನ ಹರಿಸೋಣ

### ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಗೆ ಬೆಂಬಲ

ಕೃಷಿ ಉತ್ಪಾದಕತೆ ಹೆಚ್ಚಿಸಲು, ಬಂಡವಾಳ






ಭಾವನೆಗಳ ಹುಚ್ಚು ಕುದುರೆ ಓಟಕ್ಕಿರಲಿ ಕಡಿವಾಣ



3

ನಿಮಗೆ ತಿಳಿದಿರಲಿ ಆರೋಗ್ಯ ವಿಮೆ ವಿಧಗಳು



5

ವಿತರಣೆಗೆ ಉತ್ತೇಜನ ನೀಡಲು ಮತ್ತು ಗ್ರಾಮೀಣ ಮೂಲಸೌಕರ್ಯಕ್ಕೆ ಬಲ ನೀಡಲು ಬಜೆಟ್‌ನಲ್ಲಿ ಕ್ರಮಗಳನ್ನು ಪ್ರಕಟಿಸಲಾಗಿದೆ.

- 'ಗ್ರಾಮೀಣ ಸಮೃದ್ಧಿ ಮತ್ತು ಸ್ಥಿತಿಸ್ಥಾಪಕತ್ವ' ಎಂಬ ಹೆಸರಿನ ಬಹುವಲಯದ ಉಪಕ್ರಮವನ್ನು ರಾಜ್ಯದ ಬೆಂಬಲದೊಂದಿಗೆ ಆರಂಭಿಸಲಾಗುವುದು.
- ನೂರು ಜಿಲ್ಲೆಗಳಲ್ಲಿ 1.7 ಕೋಟಿ ರೈತರನ್ನು ಒಳಗೊಳ್ಳುವ ಧನ ಧಾನ್ಯ ಕೃಷಿ ಯೋಜನೆಯನ್ನು ಆರಂಭಿಸಲಾಗುವುದು. ಕಡಿಮೆ ಉತ್ಪಾದಕತೆ, ಮಧ್ಯಮ ಪ್ರಮಾಣದ ಬೆಳೆ ತೀವ್ರತೆ ಹಾಗೂ ಸರಾಸರಿಗಿಂತ ಕಡಿಮೆ ಸಾಲದ ಲಭ್ಯತೆ ಹೊಂದಿರುವ ರೈತರಿಗೆ ಇದರಿಂದ ಪ್ರಯೋಜನ ಉಂಟಾಗಲಿದೆ.
- ಇದರ ಜೊತೆಗೆ ದ್ವಿದಳ ಧಾನ್ಯಗಳಲ್ಲಿ ಸ್ವಾವಲಂಬನೆಯನ್ನು ಸಾಧಿಸುವ ಗುರಿಯನ್ನು ಹೊಂದಿರುವ ಆರು ವರ್ಷಗಳ ಅಭಿಯಾನವನ್ನು ಆರಂಭಿಸಲಾಗುತ್ತದೆ.
- ಪೌಷ್ಟಿಕಾಂಶದ ಅಗತ್ಯಗಳ ಬಗ್ಗೆ ಹೆಚ್ಚುತ್ತಿರುವ ಅರಿವು ಮತ್ತು ಅಧಿಕಗೊಳ್ಳುತ್ತಿರುವ ಆದಾಯ ಮಟ್ಟವನ್ನು ಗಮನದಲ್ಲಿಟ್ಟು ಕೊಂಡು ಸರ್ಕಾರವು ಹಣ್ಣು ಮತ್ತು ತರಕಾರಿಗಳಿಗಾಗಿ ಸಮಗ್ರ ಕಾರ್ಯಕ್ರಮವನ್ನು ಜಾರಿಗೆ ತರಲಿದೆ.
- ಕಿಸಾನ್ ಕ್ರೆಡಿಟ್ ಕಾರ್ಡ್‌ಗಳ ಅಡಿಯಲ್ಲಿ ನೀಡಲಾಗುವ ಸಾಲದ ಮಿತಿಯನ್ನು 3ಲಕ್ಷದಿಂದ ಐದು ಲಕ್ಷಕ್ಕೆ ಹೆಚ್ಚಿಸಲಾಗುವುದು.
- ಈ ಉಪಕ್ರಮಗಳು ರೈತರ ಆದಾಯವನ್ನು ಸುಧಾರಿಸಲು ಮತ್ತು ಗ್ರಾಮೀಣ ಜೀವನೋಪಾಯ ವನ್ನು ಹೆಚ್ಚಿಸುವ ಗುರಿಯನ್ನು ಹೊಂದಿವೆ.

**ವಿಜ್ಞಾನ, ಸಂಶೋಧನೆ ಮತ್ತು ವಿನೂತನ ಆವಿಷ್ಕಾರಗಳಿಗಾಗಿ ಹೂಡಿಕೆ.**

- ಭಾರತವು ತಂತ್ರಜ್ಞಾನ, ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಜಾಗತಿಕ ನಾಯಕನಾಗುವ ಗುರಿಯನ್ನು ಹೊಂದಿದೆ ಮತ್ತು ವಿಜ್ಞಾನ ಹಾಗೂ ನಾವೀನ್ಯತೆಗಳಲ್ಲಿ ದೊಡ್ಡ ಪ್ರಮಾಣದ ಹೂಡಿಕೆಗಳ ಮೂಲಕ 2025ರ ಬಜೆಟ್ ಈ ದೃಷ್ಟಿಕೋನದ ಪರ್ಯಾಲೋಚನೆಯನ್ನು ನಡೆಸುತ್ತದೆ.
- ಕೈಗಾರಿಕಾ ಸಂಶೋಧನೆ ಮತ್ತು ಅಭಿವೃದ್ಧಿಗೆ ಪ್ರೋತ್ಸಾಹ ನೀಡಲು ಖಾಸಗಿ ವಲಯ ಆಧಾರಿತ ಸಂಶೋಧನೆ, ಅಭಿವೃದ್ಧಿ ಮತ್ತು ವಿನೂತನ ಉಪಕ್ರಮಗಳಿಗೆ 2000 ಕೋಟಿ ರೂ. ಮಂಜೂರು ಮಾಡಲಾಗಿದೆ.
- ಅತ್ಯಾಧುನಿಕ ತಂತ್ರಜ್ಞಾನ ಸಂಶೋಧನೆಯನ್ನು ಕೈಗೊಳ್ಳಲು ಪ್ರತಿಭಾವಂತರಿಗೆ ಉತ್ತೇಜನವನ್ನು ನೀಡಲು ಐಐಟಿ ಮತ್ತು ಐಐಎಸ್‌ಸಿಯಲ್ಲಿನ ಸಂಶೋಧನೆಗೆ ಪ್ರಧಾನ ಮಂತ್ರಿ ಸಂಶೋಧನೆ ಫೆಲೋಶಿಪ್ ವತಿಯಿಂದ 10000 ಫೆಲೋಶಿಪ್‌ಗಳನ್ನು ನೀಡಲಾಗುವುದು.
- ಈ ಕ್ರಮಗಳು ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಖಾಸಗಿ ವಲಯದ ಸಹಭಾಗಿತ್ವಕ್ಕೆ ಉತ್ತೇಜನ ನೀಡಲಿದೆ ಮತ್ತು ಇದರಿಂದ ಆವಿಷ್ಕಾರ ಆಧಾರಿತ ಪ್ರಗತಿಗೆ ದಾರಿಮಾಡಿಕೊಡಲಿದೆ.

**ಆದಾಯ ತೆರಿಗೆ ವಿನಾಯ್ತಿ:**

- ಸರ್ಕಾರವು ವಾರ್ಷಿಕ ಆದಾಯಕ್ಕಿರುವ ತೆರಿಗೆ ವಿನಾಯ್ತಿಯನ್ನು ಏಳು ಲಕ್ಷ ರೂ. ಗಳಿಂದ 12 ಲಕ್ಷ ರೂ.ಗೆ ಏರಿಸುವ ಮೂಲಕ ಗಮನಾರ್ಹವಾದ ಆದಾಯ ತೆರಿಗೆ ವಿನಾಯ್ತಿಯನ್ನು ಘೋಷಿಸಿದೆ. ವೇತನ ಪಡೆಯುವ ತೆರಿಗೆದಾರರಿಗೆ 75000 ರೂ.ಗಳ ಸ್ಟಾಂಡರ್ಡ್ ಡಿಡಕ್ಷನ್ ಅನ್ವಯವಾಗುತ್ತದೆ. ಹಳೆಯ ತೆರಿಗೆ ಪದ್ಧತಿಯಲ್ಲಿ ಯಾವುದೇ ಹಣಕಾಸು ವರ್ಷ 2025–26ರಿಂದ 12 ಲಕ್ಷ ರೂ. ವರೆಗಿನ ಆದಾಯಕ್ಕೆ ಶೇ.100ರಷ್ಟು ತೆರಿಗೆ ವಿನಾಯ್ತಿಯನ್ನು ಒದಗಿಸಲಾಗಿದೆ. ಹಣಕಾಸು ವರ್ಷ 24–25ರಲ್ಲಿ ಈ ತೆರಿಗೆ ವಿನಾಯ್ತಿ ವಾರ್ಷಿಕ ಏಳು ಲಕ್ಷ ರೂ. ಆದಾಯದ ತನಕ ಮಾತ್ರ ಇತ್ತು.

| ಈಗಿನ ತೆರಿಗೆ ಪದ್ಧತಿ (FY24-25) | | ಪರಿಷ್ಕೃತ ತೆರಿಗೆ ಪದ್ಧತಿ(FY25-26) | |
|---|---|---|---|
| ರೂ.3 ಲಕ್ಷ ವರೆಗೆ | 0% | 4ಲಕ್ಷ ವರೆಗೆ | 0% |
| ರೂ. 3-7 ಲಕ್ಷ | 5% | ರೂ. 4-8 ಲಕ್ಷ | 5% |
| ರೂ. 7-10 ಲಕ್ಷ | 10% | ರೂ. 8-12 ಲಕ್ಷ | 10% |
| ರೂ. 10-12 ಲಕ್ಷ | 15% | ರೂ. 12-16 ಲಕ್ಷ | 15% |
| ರೂ. 12-15 ಲಕ್ಷ | 20% | ರೂ. 16-20 ಲಕ್ಷ | 20% |
| ರೂ. 15 ಲಕ್ಷಕ್ಕೂ ಮೇಲೆ | 30% | ರೂ. 20-24 ಲಕ್ಷ | 25% |
| | | 24 ಲಕ್ಷಕ್ಕೂ ಮೇಲೆ | 30% |

- ವಿಶೇಷವಾಗಿ ಹೊಸ ತೆರಿಗೆ ಪದ್ಧತಿ ಅಡಿಯಲ್ಲಿ ಗಮನಾರ್ಹ ಆದಾಯ ತೆರಿಗೆ ವಿನಾಯ್ತಿಯಿಂದಾಗಿ ಮಧ್ಯಮವರ್ಗದವರ ವಿಲೇವಾರಿ ಆದಾಯವನ್ನು ಹೆಚ್ಚಿಸಲಿದೆ. ಇದರಿಂದ ಗ್ರಾಹಕರ ಖರ್ಚುಮಾಡುವ ಸಾಮರ್ಥ್ಯ ಹೆಚ್ಚಲಿದೆ. ಇದು ಗ್ರಾಹಕ ಬಳಕೆ ಸಾಮಗ್ರಿಗಳು, ಚಿಲ್ಲರೆ ಮತ್ತು ಆಟೋಮೊಬೈಲ್ಸ್‌ವಲಯಗಳ ಮೇಲೆ ಸಕಾರಾತ್ಮಕ ಪರಿಣಾಮ ಉಂಟಾಗುತ್ತದೆ.
- ಹೆಚ್ಚುವರಿಯಾಗಿ ಹಿರಿಯ ನಾಗರಿಕರಿಗೆ ನೀಡಲಾಗುವ ಬಡ್ಡಿಯ ಮೇಲಿನ ಟಿಡಿಎಸ್ ಮಿತಿಯನ್ನು 50000 ರೂ.ಗಳಿಂದ ಒಂದು ಲಕ್ಷಕ್ಕೆ ಹೆಚ್ಚಿಸಲಾಗಿದೆ ಮತ್ತು ಬಾಡಿಗೆ ಮೇಲಿನ ವಾರ್ಷಿಕ ಟಿಡಿಎಸ್ ಮಿತಿಯನ್ನು 2.4ಲಕ್ಷ ರೂ. ಗಳಿಂದ 6ಲಕ್ಷಕ್ಕೆ ಹೆಚ್ಚಿಸಲಾಗಿದೆ.
- 2024ರ ಆಗಸ್ಟ್ 29ರಂದು ಅಥವಾ ಅದರ ನಂತರ ರಾಷ್ಟ್ರೀಯ ಉಳಿತಾಯ ಯೋಜನೆಯಿಂದ ಮಾಡಲಾದ ವಿಡ್‌ಡ್ರಾವಲ್ ಈಗ ತೆರಿಗೆ ವಿನಾಯ್ತಿಗೆ ಒಳಪಟ್ಟಿದೆ.
- ನವೀಕರಿಸಲಾದ ಆದಾಯ ತೆರಿಗೆ ಸಲ್ಲಿಕೆಗೆ ಇರುವ ಗಡುವನ್ನು ಎರಡರಿಂದ ನಾಲ್ಕು ವರ್ಷಗಳಿಗೆ ವಿಸ್ತರಿಸಲಾಗಿದೆ.
- ಹೊಸ ಆದಾಯ ತೆರಿಗೆ ಮಸೂದೆಯನ್ನು ಪರಿಚಯಿಸಲು ಸಿದ್ಧತೆ ನಡೆಸಲಾಗುತ್ತಿದೆ. ತೆರಿಗೆ ಪದ್ಧತಿಯನ್ನು ಇನ್ನಷ್ಟು ಸರಳಗೊಳಿಸುವುದು ಇದರ ಉದ್ದೇಶವಾಗಿದೆ.

**ವಿತ್ತೀಯ ಶಿಸ್ತು ನಿರ್ವಹಣೆ:**

- ಗಮನಾರ್ಹ ತೆರಿಗೆ ಕಡಿತಗಳ ಹೊರತಾಗಿಯೂ ಸರ್ಕಾರವು 2025–26ರಲ್ಲಿ ವಿತ್ತೀಯ ಕೊರತೆಯನ್ನು ಜಿಡಿಪಿಯ ಶೇ.4.4ಕ್ಕೆ ಕಡಿತಗೊಳಿಸಲು ಉದ್ದೇಶಿಸಿದೆ. ವಿತ್ತೀಯ ವಿವೇಚನೆಗೆ ಇರುವ ಬದ್ಧತೆ ಮತ್ತು ಸರ್ಕಾರಿ ಸಾಲವನ್ನು ನಿಭಾಯಿಸುವ ಬಗೆಯನ್ನು ಇದು ಸೂಚಿಸುತ್ತದೆ.

ಕೆವೈಸಿ ಪುನರ್ರಚನೆ:

- 2025ರಲ್ಲಿ ಸರ್ಕಾರವು ಸರಳೀಕೃತ ಹಾಗೂ ಸುಧಾರಿತ ಸೆಂಟ್ರಲ್ ನೋ ಯುವರ್ ಕಸ್ಟಮರ್ (ಕೆವೈಸಿ) ವ್ಯವಸ್ಥೆಯನ್ನು ಪರಿಚಯಿಸಲಿದೆ. ಇದರ ಜೊತೆಗೆ ನಿಯಮಿತವಾಗಿ ನವೀಕರಣಗಳನ್ನು

ಮಾಡಲು ಹೊಸ ಚೌಕಟ್ಟನ್ನು ರೂಪಿಸಲಾಗುತ್ತದೆ. ಈ ಉಪಕ್ರಮವು ಕೆವೈಸಿ ಪ್ರಕ್ರಿಯೆಯನ್ನು ಸುಗಮಗೊಳಿಸುವ ಮತ್ತು ಬಳಕೆದಾರರ ಅನುಭವವನ್ನು ಸುಧಾರಿಸುವ ಗುರಿ ಹೊಂದಿದೆ.

**ಎಂಎಸ್‌ಎಂಇಗಳು:**

- ಎಲ್ಲ ಎಂಎಸ್‌ಎಂಇಗಳ ವರ್ಗೀಕರಣ-ಕ್ಕಾಗಿ ಹೂಡಿಕೆ ಮತ್ತು ವಹಿವಾಟಿನ ಮಿತಿಗಳನ್ನು ಕ್ರಮವಾಗಿ 2.5 ಮತ್ತು 2ಪಟ್ಟು ಹೆಚ್ಚಿಸಲಾಗುತ್ತದೆ.
- ಸಣ್ಣ-ಉದ್ಯಮಗಳಿಗೆ ನೀಡಲಾಗುತ್ತಿದ್ದ ಕ್ರೆಡಿಟ್ ಗ್ಯಾರಂಟಿ ಸೌಲಭ್ಯದ ಮಿತಿಯನ್ನು ಐದರಿಂದ ಹತ್ತು ಕೋಟಿ ರೂ.ಗೆ ಹೆಚ್ಚಿಸಲಾಗುವುದು.
- ಸಣ್ಣ-ಉದ್ಯಮಗಳಿಗೆ ನೀಡಲಾಗುತ್ತಿದ್ದ ಕಸ್ಟಮೈಸ್ ಮಾಡಲಾದ ಕ್ರೆಡಿಟ್ ಕಾರ್ಡ್‌ಗಳನ್ನು ಐದು ಲಕ್ಷ ರೂ. ಕ್ರೆಡಿಟ್ ಮಿತಿಯೊಂದಿಗೆ ನೀಡಲಾಗುವುದು.

**ರಫ್ತು ಉತ್ತೇಜನ ಮತ್ತು ಕೈಗಾರಿಕಾ ಪ್ರಗತಿ:**

- ರಫ್ತು ಮತ್ತು ತಯಾರಿಕಾ ಕ್ಷೇತ್ರಕ್ಕೆ ಅದರಲ್ಲೂ ಮುಖ್ಯವಾಗಿ ಎಲೆಕ್ಟ್ರಾನಿಕ್ಸ್, ಎಲೆಕ್ಟ್ರಿಕ್ ವಾಹನಗಳು (ಇವಿ) ಮತ್ತು ಹಡಗು ನಿರ್ಮಾಣದಂತಹ ಕ್ಷೇತ್ರಗಳಿಗೆ ಉತ್ತೇಜನವನ್ನು ನೀಡಲು ಬಜೆಟ್‌ನಲ್ಲಿ ಅನೇಕ ತೆರಿಗೆ ವಿನಾಯ್ತಿ ಮತ್ತು ಪ್ರೋತ್ಸಾಹಗಳನ್ನು ಪ್ರಕಟಿಸಲಾಗಿದೆ.

**ನಿಬಂಧನೆಗಳ ಸುಧಾರಣೆಗೆ ನಿರಂತರ ಪ್ರಯತ್ನ:**
ಭಾರತದಲ್ಲಿ ವ್ಯಾಪಾರ ಮಾಡುವುದನ್ನು ಸುಲಭಗೊಳಿಸುವ ದೃಷ್ಟಿಯಿಂದ ನಿಬಂಧನೆಗಳನ್ನು ಪರಿಶೀಲಿಸಲು ಮತ್ತು ಸುಗಮಗೊಳಿಸಲು ಸರ್ಕಾರ ಸಮಿತಿಯೊಂದನ್ನು ರಚನೆ ಮಾಡುವ ಯೋಜನೆಯನ್ನು ಹೊಂದಿದೆ. ಇದರಿಂದ ಭಾರತದಲ್ಲಿ ವ್ಯಾಪಾರವನ್ನು ಸುಗಮಗೊಳಿಸಿ ಹೂಡಿಕೆಗೆ ಉತ್ತೇಜನ ನೀಡಬಹುದು ಎಂಬ ಉದ್ದೇಶ.

**ಬಾಟಮ್‌ಲೈನ್:** ಹಣಕಾಸು ವಿವೇಚನೆಯನ್ನು ಕಾಯ್ದುಕೊಳ್ಳುವುದರ ಜೊತೆಗೆ ಬಳಕೆ ಮತ್ತು ಮೂಲಸೌಕರ್ಯಕ್ಕೆ ಉತ್ತೇಜನ ನೀಡುವ ಉದ್ದೇಶ 2025ರ ಬಜೆಟ್‌ನಲ್ಲಿರುವುದು ಸ್ಪಷ್ಟವಾಗಿ ಕಾಣುತ್ತದೆ. ಮಧ್ಯಮವರ್ಗಕ್ಕೆ ತೆರಿಗೆ ವಿನಾಯ್ತಿಯನ್ನು ನೀಡುವ ಮೂಲಕ, ಹೆಚ್ಚಿಸಲಾದ ಬಂಡವಾಳ ವೆಚ್ಚ ಹಾಗೂ ಸಾರ್ವಜನಿಕ-ಖಾಸಗಿ ಸಹಭಾಗಿತ್ವದ ಮೂಲಕ ಮೂಲಸೌಕರ್ಯ ಅಭಿವೃದ್ಧಿಯನ್ನು ಉತ್ತೇಜಿಸುವ ಮೂಲಕ ಈ ಗುರಿಯನ್ನು ಸಾಧಿಸುವ ಉದ್ದೇಶ ಹೊಂದಲಾಗಿದೆ. ಎಲ್ಲಕ್ಕಿಂತ ಮುಖ್ಯವಾದ ಮಾತು ಏನೆಂದರೆ, ಬಜೆಟ್ ಅಲ್ಪಾವಧಿ ಆರ್ಥಿಕ ಉತ್ತೇಜನ ಹಾಗೂ ದೀರ್ಘಾವಧಿ ಹಣಕಾಸಿನ ಜವಾಬ್ದಾರಿಯ ನಡುವೆ ಸಮತೋಲನವನ್ನು ಸಾಧಿಸಲು ಪ್ರಯತ್ನಿಸುತ್ತದೆ.

# ಭಾವನೆಗಳ ಹುಚ್ಚು ಕುದುರೆ ಓಟಕ್ಕಿರಲಿ ಕಡಿವಾಣ

**ಇತ್ತೀಚಿಗೆ** ಮಾರುಕಟ್ಟೆಯಲ್ಲಿ ಆಗುತ್ತಿರುವ ಏರಿಳಿತಗಳು, ಅದಕ್ಕೆ ತಕ್ಕಂತೆ ಏರುಗತಿಯಲ್ಲಿ ಸಾಗಿರುವ ಬೆಲೆ. ಈ ಕಾರಣದಿಂದ ಹೂಡಿಕೆದಾರ-ರಿಗೆ ತಲೆಚಿಟ್ಟು ಹಿಡಿಯುವಂತಾಗಿದ್ದರೆ ಅಚ್ಚರಿಯಿಲ್ಲ. ದಿಗಿಲು ಮೂಡಿಸುವ ಇಂತಹ ಸಮಯದಲ್ಲಿ ನಮ್ಮ ಭಾವನೆಗಳನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳುವುದು ಸವಾಲಿನ ಕೆಲಸ. ನಮ್ಮ ನಡವಳಿಕೆಯಲ್ಲಿನ ಪೂರ್ವಗ್ರಹದಿಂದಾಗಿ ಆತುರಕ್ಕೆ ಬಿದ್ದು ಏನೇನೋ ನಿರ್ಧಾರಗಳನ್ನು ಕೈಗೊಳ್ಳಬಹುದು. ಅನುಭವಿಗಳ ಮಾತೇ ಹೇಳುವಂತೆ ಯಶಸ್ವೀ ಹೂಡಿಕೆ ಕಾರ್ಯತಂತ್ರಕ್ಕೆ ಶಿಸ್ತೇ ಮೂಲಾಧಾರ. ಹಾಗಂತ ನಿಯಮಗಳಿಗೆ ಅಂಟಿಕೊಂಡು ಕುಳಿತುಕೊಳ್ಳುವಂತಿಲ್ಲ. ನಿಮ್ಮ ಭಾವನೆಗಳನ್ನೂ ನಿಯಂತ್ರಣದಲ್ಲಿ ಇಟ್ಟುಕೊಳ್ಳುವುದು ಮುಖ್ಯ. ಹೂಡಿಕೆಯಲ್ಲಿ ಆಗುವ ಮಹಾ ತಪ್ಪುಗಳು ಕೆಟ್ಟ ಕಾರ್ಯತಂತ್ರಗಳಿಂದ ಮಾತ್ರ ಆಗಿರುವುದಿಲ್ಲ. ಬದಲಾಗಿ ಭಾವನಾತ್ಮಕ ನಿರ್ಧಾರಗಳಿಂದಲೂ ಆಗಿರುತ್ತವೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.

ಹಣಾಕಾಸು ಕ್ಷೇತ್ರದಲ್ಲಿ ನಾವು ಅತ್ಯಂತ ಗೌರವಿಸುವ ಲೇಖಕರಲ್ಲಿ ಒಬ್ಬರಾದ ನಿಕ್ ಮರ್ರೆ ಅವರ ಮಾತನ್ನು ಇಲ್ಲಿ ಉಲ್ಲೇಖಿಸಬಹುದು, "ಹೂಡಿಕೆಯ ಕಾರ್ಯಕ್ಷಮತೆ ನೈಜ ಆದ-ಾಯ ವನ್ನು ನಿರ್ಧರಿಸುವುದಿಲ್ಲ; ಹೂಡಿಕೆದಾರರ ವರ್ತನೆಯು ನಿರ್ಧರಿಸುತ್ತದೆ."

ಮಾರುಕಟ್ಟೆಯಲ್ಲಿ ಗೂಳಿ ನಾಗಾಲೋಟದಲ್ಲಿ ಓಡುತ್ತಿದ್ದಾಗ 'ಸಕತ್ ಲಾಭ ಮಾಡಿಕೊಳ್ಳಲು ಇದು ಸಕಾಲ' ಎಂಬ ದುರಾಸೆ ನಮ್ಮ ಕಿವಿಯಲ್ಲಿ ಪಿಸುಗುಟ್ಟುತ್ತದೆ. ಇಂತಹ ಸಂದರ್ಭದಲ್ಲಿ ನಮ್ಮ ಆತ್ಮವಿಶ್ವಾಸ ಅಪಾಯಕಾರಿ ಮಟ್ಟದಲ್ಲಿ ಕುಣಿದಾಡುತ್ತಿರುತ್ತದೆ.ಈ ಹೊತ್ತಿನಲ್ಲಿಯೇ ನಾವು ನಿಜವಾದ 'ಮಾರುಕಟ್ಟೆ ಗುರು'ಗಳಾಗಿ ಅವತಾರ ತಾಳುತ್ತೇವೆ. ಇನ್ನೊಂದು ಮಗ್ಗುಲಲ್ಲಿ ಮೊಳಗುತ್ತಿರುವ ಎಚ್ಚರಿಕೆಯ ಗಂಟೆಯ ಸದ್ದು ನಮಗೆ ಕೇಳುವುದೇ ಇಲ್ಲ. ಅದ್ಯಾವುದೋ ತಿರುವಿನಲ್ಲಿ ಅಲೆಗಳು ಉಲ್ಟಾ ತಿರುಗುತ್ತವೆ. ಬೆಲೆಗಳು ಕುಸಿಯುತ್ತವೆ. ಭಯದ ಭಾರವಾದ ಕಲ್ಲು ಎದೆಯ ಮೇಲೇ ಬಂದು ಕುಳಿತುಕೊಳ್ಳುತ್ತದೆ. ಆಕಾಶವೇ ಕಳಚಿಬಿದ್ದ ಅನುಭವವಾಗುತ್ತದೆ. ಮೇಲಕ್ಕೇರಿದ್ದ ಷೇರುಗಳೆಲ್ಲ ಪತರಗುಟ್ಟಿದಂತೆ



ಕಳಚಿಬಿದ್ದು ತಳಕಚ್ಚುತ್ತವೆ. ಈಗ ನಷ್ಟಕ್ಕೆ ಕಡಿವಾಣ ಹಾಕುವ ಕಸರತ್ತು.ಲಾಸ್‌ಗೆ ಲಾಕ್ ಮಾಡುವ ಆತುರಕ್ಕೆ ಬೀಳುತ್ತೇವೆ. ಅಂತಿಮವಾಗಿ ಹಾಗೂ ಹೀಗೂ ಚೇತರಿಸಿಕೊಳ್ಳುತ್ತೇವೆ.

ಈ ಭಾವನಾತ್ಮಕ ರೋಲರ್-ಕೋಸ್ಟರ್ ನಮ್ಮದೇ ನಡವಳಿಕೆ ಪೂರ್ವಗ್ರಹದ ಪರಿಣಾಮ. ಇವೆಲ್ಲವೂ ನಮ್ಮನ್ನು ದಾರಿ ತಪ್ಪಿಸುವ ಮಾನಸಿಕ ಶಾರ್ಟ್‌ಕಟ್‌ಗಳು. ನಾವು ನಮ್ಮದೇ ಗ್ರಹಿಕೆಗಳ ಬಂದಿಯಾಗುತ್ತೇವೆ. ನಮ್ಮ ವಿಶ್ಲೇಷಣೆಯ ಮಾಸ್ಟರ್‌ಗಳಾಗುವುದಿಲ್ಲ. ಬೆಲೆ ಗಗನಮುಖಿಯಾಗಿದ್ದಾಗ ಖರೀದಿ ಮಾಡುತ್ತೇವೆ. ಕಡಿಮೆ ಬೆಲೆಗೆ ಮಾರಾಟ ಮಾಡುತ್ತೇವೆ. ಕೊನೆಗೆ ನಾವು ಏಕೆ ಮುಂದೆ ಸಾಗುತ್ತಿಲ್ಲ, ನಿಂತಲ್ಲೇ ಗಕ್ಕನೇ ನಿಂತಿದ್ದೇವೆ ಎಂದು ಅಚ್ಚ-ರಿಪಡುತ್ತೇವೆ. ಸತ್ಯದ ಮಾತೆಂದರೆ ಯಶಸ್ವೀ ಹೂಡಿಕೆಯು ಕೇವಲ ಸಂಖ್ಯೆಗಳ ಲೆಕ್ಕಾಚಾರದಲ್ಲಿ ನಡೆಯುವುದಿಲ್ಲ. ಇದು ನಮ್ಮೊಳಗೇ ಅಡಗಿರುವ ಅವಗುಣಗಳನ್ನು ಅರ್ಥಮಾಡಿಕೊಳ್ಳುವ ಮತ್ತು ಅವುಗಳನ್ನು ಗೆಲ್ಲುವ ಕಲೆಯಷ್ಟೇ. ತರ್ಕಬದ್ಧವಾದ

ಹೂಡಿಕೆ ನಿರ್ಧಾರಗಳನ್ನು ಕೈಗೊಳ್ಳಲು ಇಂತಹ ಪೂರ್ವಗ್ರಹಗಳನ್ನು ಗುರುತಿಸುವುದು ಮತ್ತು ನಿಭಾಯಿಸುವುದು ನಿರ್ಣಾಯಕವಾಗಿದೆ.

**ನಮ್ಮ ಹೂಡಿಕೆ ನಿರ್ಧಾರಗಳ ಮೇಲೆ ಪ್ರಭಾವ ಬೀರಬಹುದಾದ ನಡವಳಿಕೆ ಪೂರ್ವಗ್ರಹಗಳು:**

**ನಷ್ಟದ ಭಯ:** ನಷ್ಟ ಉಂಟಾಗುತ್ತದೆ ಎನ್ನುವ ಭಯ ಹೂಡಿಕೆದಾರರ ಮನಸ್ಸಿನೊಳಗೆ ಕುಳಿತುಬಿಟ್ಟರೆ ಅವರು ಆದ ಲಾಭವನ್ನೂ ಎಂಜಾಯ್ ಮಾಡದಂತಾಗುತ್ತದೆ. ಇದರಿಂದ ಕೆಲವೊಮ್ಮೆ ಮಾರುಕಟ್ಟೆ ಕುಸಿತದ ಸಂದರ್ಭದಲ್ಲಿ ಭಾರೀ ಕೊಳ್ಳುವಿಕೆಗೆ ಮತ್ತು ಎಸ್‌ಐಪಿಯನ್ನು ನಿಲ್ಲಿಸಿಬಿಡಲು ಕಾರಣವಾಗಬಹುದು. ದೀರ್ಘಾವಧಿ ಮೂಲಭೂತ ಅಂಶಗಳು ಬಲವಾಗಿದ್ದರೂ ಇದು ಸಂಭವಿಸಬಹುದು. ಇಂತಹ ಪೂರ್ವಗ್ರಹದಿಂದ ಪಾರಾಗಲು ಅಲ್ಪಾವಧಿ ಮಾರುಕಟ್ಟೆ ಚಲನೆಯ ಮೇಲೆ ನಂಬಿಕೆ ಇಡದೇ ದೀರ್ಘಾವಧಿ ಉದ್ದೇಶಗಳ ಕಡೆಗೆ ಗಮನವಿಡಬೇಕು.

**ಗುಂಪಿನ ಮನಸ್ಥಿತಿ:** ಹೂಡಿಕೆದಾರರು ಕೆಲವೊಮ್ಮೆ 'ಗುಂಪಿನ ಮನಸ್ಥಿತಿ'ಗೆ ಬಲಿಯಾಗುವ ಸಾಧ್ಯತೆ ಇರುತ್ತದೆ. ಇದು ಅವರ ಆದಾಯಗಳ ವಿಚಾರದಲ್ಲಿ ನಿರ್ಣಾಯಕವಾಗಿದೆ. ಮಾರುಕಟ್ಟೆ ಇಳಿಮುಖವಾಗಿದ್ದಾಗ ಉಳಿದವರು ಮಾರಾಟ ಮಾಡುವುದನ್ನು ಕಂಡು ಹೂಡಿಕೆದಾರರು ಭಯಭೀತರಾಗಬಹುದು.ಅವರ ದೀರ್ಘಾವಧಿ ಕಾರ್ಯತಂತ್ರಕ್ಕೆ ವಿರುದ್ಧವಾಗಿದ್ದರೂ ಕೂಡ ಆತುರಕ್ಕೆ ಬಿದ್ದು ಮಾರಾಟ ಮಾಡಬಹುದು.ಈ ರೀತಿಯ ಪ್ರತಿಕ್ರಿಯಾತ್ಮಕ ನಡವಳಿಕೆಯು ಸಾಮಾನ್ಯವಾಗಿ ಭಯ ಮತ್ತು ಅರಿವಿನ ಕೊರತೆಯಿಂದ ಉಂಟಾಗುತ್ತದೆ. ಸ್ವತಂತ್ರವಾದ ಸಂಶೋಧನೆ ಮತ್ತು ಅತ್ಯುತ್ತಮವಾದ ಹೂಡಿಕೆ ಕಾರ್ಯತಂತ್ರಗಳು ಇಂತಹ ಸಂದರ್ಭದಲ್ಲಿ ನೆರವಿಗೆ ಬರುತ್ತವೆ.

**ದೃಢೀಕರಣದ ಪೂರ್ವಗ್ರಹ:** ಮಾರುಕಟ್ಟೆ ಕುಸಿತ ಕಾಣುತ್ತಿದ್ದಾಗ ದೃಢೀಕರಣ ಪೂರ್ವಗ್ರಹ ಹಾನಿಕಾರಕವಾಗಿ ಪರಿಣಮಿಸಬಹುದು. ಬೆಲೆಗಳು ತಗ್ಗಿದಾಗ, ಹೂಡಿಕೆದಾರರು ತಮ್ಮ ಭಯವನ್ನು ದೃಢೀಕರಿಸುವ ಮಾಹಿತಿಯನ್ನು ಆಯ್ಕೆ ಮಾಡಿಕೊಳ್ಳಬಹುದು. ಉದಾಹರಣೆಗೆ ಋಣಾತ್ಮಕವಾದ ಸುದ್ದಿ ಮುಖ್ಯಾಂಶಗಳು ಅಥವಾ ಮಾರುಕಟ್ಟೆಯಲ್ಲಿ 'ಕರಡಿ ಕುಣಿತ'ವನ್ನು ವಿಶ್ಲೇಷಿಸುವ ವರದಿ ಇತ್ಯಾದಿ. ಅಂತಹ ಸಂದರ್ಭದಲ್ಲಿ ಯಾವುದೇ ರೀತಿಯ ಸಕಾರಾತ್ಮಕ ಸೂಚನೆಗಳನ್ನು ಅಥವಾ ದೀರ್ಘಾವಧಿ ಭವಿಷ್ಯದ ಸುದ್ದಿಗಳನ್ನು ಅವರು ನಿರ್ಲಕ್ಷಿಸಬಹುದು. ಇಂತಹ ಮನಸ್ಥಿತಿಯಿಂದಾಗಿ ಮಾರುಕಟ್ಟೆಯ ಕುಸಿತ ಇನ್ನೂ ಕೂಡ ಮುಂದುವರಿಯುತ್ತದೆ ಎಂಬ ಸುದ್ದಿಯನ್ನು ನಂಬುತ್ತಾರೆ. ಈ ಕಾರಣಕ್ಕೆ ಭಯದಿಂದ ಮಾರಾಟ ಮಾಡಬಹುದು ಮತ್ತು ನಷ್ಟಕ್ಕೆ ಕಡಿವಾಣ ಹಾಕಬಹುದು.

ಅತಿಯಾದ ಆತ್ಮವಿಶ್ವಾಸದ ಪೂರ್ವಗ್ರಹ: ಯಶಸ್ವಿ ಹೂಡಿಕೆಗೆ ಇರುವ ಬಹುದೊಡ್ಡ ಅಡ್ಡಿ ಎಂದರೆ ಅತಿಯಾದ ಆತ್ಮವಿಶ್ವಾಸ. ಕೌಶಲ್ಯಕ್ಕಿಂತ ಮಿಗಿಲಾಗಿ ಅದೃಷ್ಟದ ಕಾರಣದಿಂದ ಗಳಿಸಿದ ಆರಂಭಿಕ ಯಶಸ್ಸು ಅತಿಯಾದ ಆತ್ಮವಿಶ್ವಾಸಕ್ಕೆ ದಾರಿಮಾಡಿಕೊಡಬಹುದು. ಅದರಿಂದಾಗಿ ಗೆಲ್ಲುವ ಷೇರುಗಳನ್ನು ಖರೀದಿ ಮಾಡುವ ಸಾಧ್ಯತೆ ಇರುತ್ತದೆ. ಇದು ಅತಿಯಾದ ಹೂಡಿಕೆಗೆ ಮುಂದಾಗಬಹುದು. ಆಗ ಅಪಾಯದ ಸಹಿಷ್ಣುತೆಯನ್ನು ಅವರು ಮೀರಬಹುದು ಮತ್ತು ಟ್ರೇಡಿಂಗ್ ಪ್ರಮಾಣವನ್ನು ಹೆಚ್ಚಿಸಲು ದಾರಿಯಾಗುತ್ತದೆ. ಹೂಡಿಕೆ ನಿರ್ಧಾರಗಳ ವಿಚಾರದಲ್ಲಿ ಸಾಧ್ಯವಾದಷ್ಟು ವಿನೀತ ಹಾಗೂ ಶಿಸ್ತುಬದ್ಧರಾಗಿದ್ದರೆ ದುಬಾರಿ ತಪ್ಪುಗಳಿಗೆ ಅಂಕುಶ ಹಾಕಬಹುದು.



**ಇತ್ತೀಚಿನ ಪೂರ್ವಗ್ರಹ:** ಈ ಪೂರ್ವಗ್ರಹದ ಕಾರಣದಿಂದ ಹೂಡಿಕೆದಾರರು ಇತ್ತೀಚಿನ ಮಾರುಕಟ್ಟೆ ವರ್ತಿಸುತ್ತಿರುವ ರೀತಿಗೆ ಪಿಗ್ಗಿ ಬೀಳಬಹುದು. ಅದರಿಂದ ಅವರು ಕುಸಿತಕ್ಕೆ ಹೆಚ್ಚು ಸ್ಪಂದಿಸಬಹುದು. ಅವರು ಇತ್ತೀಚೆಗೆ ಸಂಭವಿಸಿದ ನಷ್ಟವನ್ನು ಭವಿಷ್ಯಕ್ಕೆ ಸಮೀಕರಿಸಬಹುದು. ಇದರ ಪರಿಣಾಮವಾಗಿ ಭಯದಿಂದ ಮಾರಾಟ ಮಾಡಿ, ಸಂಭಾವ್ಯ ಚೇತರಿಕೆಯಿಂದ ತಪ್ಪಿಸಿಕೊಳ್ಳಬಹುದು. ಈ ಪೂರ್ವಗ್ರಹದಿಂದಾಗಿ ಹೂಡಿಕೆದಾರರು ದೀರ್ಘಾವಧಿ ಟ್ರೆಂಡ್‌ಗಳನ್ನು ನಿರ್ಲಕ್ಷಿಸಬಹುದು ಮತ್ತು ಇತ್ತೀಚಿನ ನಿರ್ವಹಣೆಯ ಬಗ್ಗೆ ಗಮನ ಹರಿಸದೇ ಇರಬಹುದು. ಇವೆಲ್ಲ ಕಾರಣದಿಂದ ಕಳಪೆ ನಿರ್ಧಾರಗಳಿಗೆ ಕಾರಣವಾಗಬಹುದು.

**ತಾನು ಅಂಟಿಕೊಂಡಿರುವ ನಂಬಿಕೆ:** ಹೂಡಿಕೆದಾರರು ತಮ್ಮ ಹೂಡಿಕೆಗಳಿಗೆ ತಕ್ಕಂತೆ ಮಾನಸಿಕವಾಗಿ ಸಿದ್ಧತೆ ಮಾಡಿಕೊಂಡಿರುತ್ತಾರೆ. ಒಂದು ವೇಳೆ ಅವರು ಹೊಂದಿರುವ ಷೇರುಗಳು ಅತ್ಯಂತ ವೇಗವಾಗಿ ಏರುಗತಿಯಲ್ಲಿ ಸಾಗುತ್ತಿದ್ದರೆ ಮತ್ತು ಅದು ಇನ್ನಷ್ಟು ಏರುಗತಿಯಲ್ಲಿ ಸಾಗುತ್ತದೆ ಎಂಬ ವಿಶ್ವಾಸವಿದ್ದರೂ ಕೂಡ ಲಾಭವನ್ನು ಬುಕ್‌ಮಾಡಲು ಬಯಸುತ್ತಾರೆ. ಇಂತಹ ಕ್ರಮದಿಂದಾಗಿ ಜಯದ ಹಾದಿಯಲ್ಲಿ ಸಾಗುತ್ತಿರುವ ಷೇರುಗಳನ್ನು ಕೂಡ ಬಹಳ ಬೇಗ ಮಾರಾಟ ಮಾಡಿಬಿಡುತ್ತಾರೆ. ಇನ್ನೊಂದು ಕಡೆ ನಷ್ಟದ ದಾರಿಯಲ್ಲಿರುವ ಷೇರುಗಳು ಚೇತರಿಸಿ ಕೊಳ್ಳುತ್ತವೆ ಎಂಬ ಭರವಸೆಯೊಂದಿಗೆ ಕಾಯ್ದಿಟ್ಟುಕೊಂಡಿರುತ್ತಾರೆ. ಹೂಡಿಕೆದಾರರು ಹೀಗೆ ತಾನು ಅಂಟಿಕೊಂಡಿರುವ ನಂಬಿಕೆಯಿಂದಾಗಿ ಋಣಾತ್ಮಕ ಪರಿಣಾಮಗಳು ಉಂಟಾಗಬಹುದು.

ಇಂತಹ ನಡವಳಿಕೆಗೆ ಸಂಬಂಧಿಸಿದ ಪೂರ್ವಗ್ರಹಗಳಿಂದ ಪಾರಾಗಲು ಮತ್ತು ಹೂಡಿಕೆಯ ವಿಚಾರದಲ್ಲಿ ಅಂತಹ ಭಾವನೆಗಳನ್ನು ಕಿತ್ತುಹಾಕಲು ಇರುವ ಒಂದು ಮಾರ್ಗವೆಂದರೆ ಮ್ಯುಚ್ಯುಯಲ್ ಫಂಡ್ ವಿತರಕರ ಜೊತೆಗೆ ಕೈಜೋಡಿಸಿ ಅವರ ಅಗತ್ಯಗಳಿಗೆ ತಕ್ಕ ಹಣಕಾಸು ಯೋಜನೆಯನ್ನು ರೂಪಿಸುವುದು. ಇದರ ಜೊತೆ ಜೊತೆಗೇ ಹೂಡಿಕೆದಾರರು ಮಾಸಿಕ ಎಸ್‌ಐಪಿಗಳ ಮೂಲಕ ಅಥವಾ ಡೈನಾಮಿಕ್ ಆಸ್ತಿ ಹಂಚಿಕೆ ನಿಧಿಗಳಲ್ಲಿ ಹೂಡಿಕೆ ಮಾಡುವ ಮೂಲಕ ಹೂಡಿಕೆಗೆ ಸ್ವಯಂಚಾಲಿತ ಗತಿಯನ್ನು ನೀಡಬಹುದು. ಇದರಿಂದ ಮಾರುಕಟ್ಟೆ ಮೌಲ್ಯಮಾಪನದ ಆಧಾರದಲ್ಲಿ ಪೋರ್ಟ್‌ಫೋಲಿಯೊಗೆ ಸರಿ ಹೊಂದುವ ರೀತಿಯಲ್ಲಿ ಆಸ್ತಿ ಹಂಚಿಕೆಯನ್ನು ಸ್ವಯಂಚಾಲಿತಗೊಳಿಸಬೇಕು. ಮೌಲ್ಯಮಾಪನ ಹೆಚ್ಚಾದಾಗ ಈ ನಿಧಿಗಳು ಈಕ್ವಿಟಿ ಮಾನ್ಯತೆಯನ್ನು ಕಡಿಮೆ ಮಾಡುತ್ತವೆ ಮತ್ತು ಮೌಲ್ಯಮಾಪನ ಕಡಿಮೆಯಾದಾಗ ಈಕ್ವಿಟಿ ಮಾನ್ಯತೆಯನ್ನು ಹೆಚ್ಚಿಸುತ್ತವೆ.

**ಬಾಟಮ್‌ಲೈನ್:** ಮಾರುಕಟ್ಟೆ ಏರಿಳಿತದ ಸಂದರ್ಭದಲ್ಲಿ ತರ್ಕಬದ್ಧವಾದ ಹೂಡಿಕೆ ನಿರ್ಧಾರಗಳನ್ನು ಮಾಡಲು ನಮ್ಮ ನಡವಳಿಕೆ ಪೂರ್ವಗ್ರಹಗಳನ್ನು ಬದಿಗಿಟ್ಟು ಕಾರ್ಯನಿರ್ವಹಿಸುವುದು ಅತ್ಯಂತ ಮುಖ್ಯ. ರಚನಾತ್ಮಕ ಕಾರ್ಯತಂತ್ರವನ್ನು ರೂಪಿಸುವ ಮೂಲಕ, ದೀರ್ಘಾವಧಿ ಅಗತ್ಯಗಳಿಗೆ ಗಮನ ನೀಡುವ ಮೂಲಕ ಮತ್ತು ಭಾವನಾತ್ಮಕ ಶಿಸ್ತನ್ನು ಕಾಯ್ದುಕೊಳ್ಳುವ ಮೂಲಕ ಹೂಡಿಕೆದಾರರು ಅನಿಶ್ಚಿತ ಮಾರುಕಟ್ಟೆಯಲ್ಲಿ ಆತ್ಮವಿಶ್ವಾಸದಿಂದ ಪಯಣವನ್ನು ಮುಂದುವರಿಸಬಹುದು.

# ನಿಮಗೆ ತಿಳಿದಿರಲಿ ಆರೋಗ್ಯ ವಿಮೆಯ




**ಭಾರತದಲ್ಲಿ** ಆರೋಗ್ಯ ವಿಮೆಯನ್ನು ಹಣಕಾಸು ಯೋಗಕ್ಷೇಮದ ನಿರ್ಣಾಯಕ ಅಂಶ ಎಂದು ಪರಿಗಣಿಸಲಾಗುತ್ತದೆ. ಹೆಚ್ಚುತ್ತಿರುವ ಆರೋಗ್ಯ ಸೌಲಭ್ಯಗಳ ವೆಚ್ಚ ಮತ್ತು ಕಣ್ಣಿಗೆ ಕಾಣದ ವೈದ್ಯಕೀಯ ತುರ್ತುಸ್ಥಿತಿಯಲ್ಲಿ ರಕ್ಷಣೆ ಬೇಕೆಂದರೆ ಆರೋಗ್ಯ ವಿಮೆಯನ್ನು ನಿಮ್ಮ ಬದುಕಿನ ಭಾಗವಾಗಿ ಮಾಡಿಕೊಳ್ಳಬೇಕು. ಆರೋಗ್ಯ ವಿಮೆ ಉತ್ಪನ್ನಗಳ ವ್ಯಾಪಕ ಶ್ರೇಣಿ ಲಭ್ಯವಿರುವ ಹಿನ್ನೆಲೆಯಲ್ಲಿ ನಿಮ್ಮ ಅಗತ್ಯಕ್ಕೆ ಯಾವುದು ಸೂಕ್ತ ಎಂಬುದನ್ನು ಅರ್ಥಮಾಡಿಕೊಳ್ಳುವುದು ಅತ್ಯಗತ್ಯ.

**1. ವೈಯಕ್ತಿಕ ಆರೋಗ್ಯ ವಿಮೆ:** ಈ ಆರೋಗ್ಯ ವಿಮೆಯನ್ನು ಒಬ್ಬ ವ್ಯಕ್ತಿಗಾಗಿ ವಿನ್ಯಾಸಗೊಳಿಸಲಾಗಿದೆ. ಇದು ಆಸ್ಪತ್ರೆಯಲ್ಲಿ ಚಿಕಿತ್ಸೆ, ಶಸ್ತ್ರಚಿಕಿತ್ಸೆ ಮತ್ತು ವೈದ್ಯಕೀಯ ವೆಚ್ಚಗಳನ್ನು ವಿಮಾ ಮಿತಿಯೊಳಗೆ ತರುತ್ತದೆ. ವಿಮೆ ಖರೀದಿ ಮಾಡುವವರ ವಯಸ್ಸು ಮತ್ತು ವೈದ್ಯಕೀಯ ಹಿನ್ನೆಲೆಯ ಆಧಾರದಲ್ಲಿ ಪ್ರಿಮಿಯಂನ್ನು ನಿರ್ಧರಿಸಲಾಗುತ್ತದೆ. ಪ್ರಾಥಮಿಕವಾಗಿ ಈ ಪಾಲಿಸಿಯು ಒಬ್ಬ ವ್ಯಕ್ತಿಗಾಗಿ ಇದ್ದರೂ ಕೂಡ ಇದನ್ನು ಸಾಮಾನ್ಯವಾಗಿ ಸಂಗಾತಿ, ಮಕ್ಕಳು ಮತ್ತು ಪಾಲಕರನ್ನು ಒಳಗೊಳ್ಳುವಂತೆ ವಿಸ್ತ-ರಿಸಬಹುದು.ಆ ಬಳಿಕ ಇದನ್ನು ಬಹುವೈಯಕ್ತಿಕ ಯೋಜನೆಗಳು (Multi-Individual plans) ಎಂದೂ ಕರೆಯಬಹುದಾಗಿದೆ.

**2. ಕುಟುಂಬ ಆರೋಗ್ಯ ವಿಮೆ(Family Floater Plan):** ಈ ಕುಟುಂಬ ಆರೋಗ್ಯ ವಿಮಾ ಪಾಲಿಸಿಯನ್ನು ಫ್ಯಾಮಿಲಿ ಫ್ಲೋಟರ್ ಪ್ಲಾನ್ ಎಂದೂ ಕರೆಯಲಾಗುತ್ತದೆ. ಒಂದೇ ಪಾಲಿಸಿ ಮತ್ತು ರಿಸ್ಕ್ ಕವರೇಜ್ ಮೊತ್ತದ ಅಡಿಯಲ್ಲಿ ಇಡೀ ಕುಟುಂಬವನ್ನು ಒಳಗೊಳ್ಳಬಹುದಾಗಿದೆ.ಇದು ಕುಟುಂಬದ ಎಲ್ಲ ಸದಸ್ಯರಿಗೆ ಹಂಚಿಕೆಯಾದ ವಿಮಾ ಮೊತ್ತವನ್ನು ನೀಡುತ್ತದೆ ಮತ್ತು ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುವುದು ಮತ್ತು ವೈದ್ಯಕೀಯ ವೆಚ್ಚಗಳನ್ನು ಭರಿಸುತ್ತದೆ. ಇದರ ಪ್ರಿಮಿಯಂನ್ನು ಸಾಮಾನ್ಯವಾಗಿ ಹಿರಿಯ ಸದಸ್ಯರ ವಯಸ್ಸಿನ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ.

ಉದಾಹರಣೆಗೆ, ವಿಮೆ ಮೊತ್ತ-ಐದು ಲಕ್ಷ ರೂ; ಇಬ್ಬರು ವಯಸ್ಕರು (ಪತಿ ಮತ್ತು ಪತ್ನಿ) ಮತ್ತು ಇಬ್ಬರು ಮಕ್ಕಳನ್ನು ಒಳಗೊಂಡ ಕುಟುಂಬ; ಹಿರಿಯ ಸದಸ್ಯರ ವಯಸ್ಸು 35; ನಗರ: ಮುಂಬಯಿ. ಒಂದು ಪ್ರಮುಖ ವಿಮಾ ಕಂಪನಿಯ ಸಮಗ್ರ ಪಾಲಿಸಿಯ ಕುಟುಂಬ ಫ್ಲೋಟರ್ ಯೋಜನೆಗೆ ಅಂದಾಜು ಪ್ರಿಮಿಯಂ ರೂ.23,750 ರೂ. ರೂ. ಐದು ಲಕ್ಷ ಮೊತ್ತದ ವಿಮೆಯನ್ನು ಕುಟುಂಬದ ಯಾವುದೇ ಸದಸ್ಯರಿಗೆ ಒಟ್ಟಾರೆಯಾಗಿ ಬಳಕೆ ಮಾಡಬಹುದು.

**3. ಗಂಭೀರ ಕಾಯಿಲೆ ವಿಮೆ:** ಈ ವಿಮೆಯು ಕ್ಯಾನ್ಸರ್, ಹೃದಯಾಘಾತ ಅಥವಾ ಪಾರ್ಶ್ವವಾಯು ಮುಂತಾದ ನಿರ್ದಿಷ್ಟ ಗಂಭೀರ ಕಾಯಿಲೆಯ ರೋಗನಿರ್ಣಯದ ಮೇಲೆ ಒಟ್ಟು ಮೊತ್ತದ ಪಾವತಿ ಮಾಡಲಾಗುತ್ತದೆ. ಇದನ್ನು ವೈದ್ಯಕೀಯ ವೆಚ್ಚಗಳು, ಆದಾಯದಲ್ಲಿನ ನಷ್ಟ ಮತ್ತು ಇತರ ಆರ್ಥಿಕ ಹೊರೆಗಳನ್ನು ಭರಿಸಲು ಬಳಸಬಹುದು.

**4. ಹಿರಿಯ ನಾಗರಿಕರ ಆರೋಗ್ಯ ವಿಮೆ:** ಅರವತ್ತು ವರ್ಷಕ್ಕಿಂತ ಮೇಲ್ಪಟ್ಟ ವ್ಯಕ್ತಿಗಳಿಗಾಗಿ ಈ ವಿಮಾ ಯೋಜನೆಯನ್ನು ವಿಶೇಷವಾಗಿ ವಿನ್ಯಾಸಗೊಳಿಸಲಾಗಿದೆ. ಇದು ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುವುದು, ಇತರ ವೈದ್ಯಕೀಯ ವೆಚ್ಚಗಳು ಮತ್ತು ಕೆಲವೊಮ್ಮೆ ಮನೆಯಲ್ಲಿಯೇ ವೈದ್ಯಕೀಯ ಚಿಕಿತ್ಸೆ ಪಡೆಯುವಂತಹ ಹೆಚ್ಚುವರಿ ಪ್ರಯೋಜನಗಳನ್ನು ಪಡೆದುಕೊಳ್ಳಲು ಅವಕಾಶ ಕಲ್ಪಿಸುತ್ತದೆ.ಆರೋಗ್ಯ ಸಂಬಂಧಿ ರಿಸ್ಕ್‌ಗಳು ಹೆಚ್ಚಿರುವ ಕಾರಣಕ್ಕೆ ಹಿರಿಯ ನಾಗರಿಕರ ಆರೋಗ್ಯ ವಿಮಾ ಯೋಜನೆಗಳಿಗೆ ಪ್ರೀಮಿಯಂ ಸಾಮಾನ್ಯವಾಗಿ ಹೆಚ್ಚಿರುತ್ತವೆ.

**5. ಸೂಪರ್ ಟಾಪ್-ಅಪ್ ಆರೋಗ್ಯ ವಿಮೆ:** ಈ ವಿಮಾ ಪಾಲಿಸಿಯು ಚಾಲ್ತಿಯಲ್ಲಿರುವ ಆರೋಗ್ಯ ವಿಮಾ ಪಾಲಿಸಿಯ ವಿಮೆ ಮೊತ್ತವನ್ನು ಮೀ-ರಿದ ಹೆಚ್ಚುವರಿ ರಕ್ಷಣೆಯನ್ನು ಕಲ್ಪಿಸುತ್ತದೆ. ಇದು ಕಡಿತಗೊಳಿಸಬಹುದಾದ ಷರತ್ತಿನೊಂದಿಗೆ ಬರುತ್ತದೆ.ಅಂದರೆ ಪಾಲಿಸಿದಾರರು ನಿರ್ದಿಷ್ಟ ಮೊತ್ತವನ್ನು ಪಾವತಿ ಮಾಡಿದ ಬಳಿಕವಷ್ಟೇ ವೆಚ್ಚಗಳನ್ನುಭರಿಸಲಾಗುತ್ತದೆ.ಈಗ ಚಾಲ್ತಿಯಲ್ಲಿರುವ ಯೋಜನೆಗಳನ್ನು ಹೊಂದಿರುವವರಿಗೆ ಹೆಚ್ಚಿನ ರಕ್ಷಣೆಯನ್ನು ಪಡೆಯಲು ವೆಚ್ಚ-ಪರಿಣಾಮಕಾ-ರಿಯಾದ ಮಾರ್ಗವಾಗಿದೆ.

ಉದಾ: ವಿಮೆ ಮೊತ್ತ-ಐದು ಲಕ್ಷ ರೂ; ಕಡಿತಗೊಳಿಸಬಹುದಾದ ಮೊತ್ತ-ಐದು ಲಕ್ಷ ರೂ.; ಇಬ್ಬರು ವಯಸ್ಕರು (ಪತಿ ಮತ್ತು ಪತ್ನಿ) ಮತ್ತು ಇಬ್ಬರು ಮಕ್ಕಳನ್ನು ಒಳಗೊಂಡ ಕುಟುಂಬ; ಹಿರಿಯ ಸದಸ್ಯರ ವಯಸ್ಸು 35; ನಗರ: ಮುಂಬಯಿ. ಪ್ರಮುಖ ವಿಮಾ ಕಂಪನಿಯ ಸಮಗ್ರ ಸೂಪರ್ ಟಾಪ್-ಅಪ್ ಪಾಲಿಸಿಯ ಕುಟುಂಬ ಫ್ಲೋಟರ್ ಯೋಜನೆಗೆ ಅಂದಾಜು ಪ್ರಿಮಿಯಂ 5,941 ರೂ. ಸೂಪರ್ ಟಾಪ್-ಅಪ್‌ನೊಂದಿಗೆ ಕುಟುಂಬದ ಒಟ್ಟು ಆರೋಗ್ಯ ವಿಮಾ ಕವರೇಜ್ 10 ಲಕ್ಷ ರೂ.ಗೆ ಹೆಚ್ಚಿಸಲ್ಪಡುತ್ತದೆ.

**6. ವೈಯಕ್ತಿಕ ಅಪಘಾತ ವಿಮೆ:** ಈ ವಿಮಾ ಪಾಲಿಸಿಯು ಅಪಘಾತದಿಂದ ಅಂಗವೈಕಲ್ಯ ಅಥ-'ವಾ ಸಾವು ಸಂಭವಿಸಿದರೆ ಆರ್ಥಿಕ ಬೆಂಬಲವನ್ನು ಒದಗಿಸುತ್ತದೆ. ಇದು ವಿಮಾದಾರರಿಗೆ ಅಥವಾ ಅವರ ಕುಟುಂಬಕ್ಕೆ ಒಟ್ಟು ಮೊತ್ತದ ಪಾವತಿಯನ್ನು ನೀಡುತ್ತದೆ ಮತ್ತು ಅಪಘಾತದಿಂದ ಉಂಟಾಗುವ ಆದಾಯ ನಷ್ಟ (ಟಿಟಿಡಿ)ದ ರಕ್ಷಣೆಯೂ ಇದರಲ್ಲಿ ಒಳಗೊಂಡಿರಬಹುದು. ಪ್ರತಿ ವಾರಕ್ಕೆ 50000

ರೂ.ತನಕ ಟಿಟಿಡಿ ಸೌಲಭ್ಯ ಕೂಡ ಲಭ್ಯವಿದೆ. ಇದನ್ನು ಐಚ್ಛಿಕ ಅಥವಾ ಅಂತರ್ಗತ ಕವರೇಜ್ ಆಗಿಯೂ ತೆಗೆದುಕೊಳ್ಳಬಹುದು.

ಉದಾ: ಶಂಕರ್ ಅವರು ಮೆಟ್ಟಿಲು ಇಳಿಯುವಾಗ ಜಾರಿ ಬಿದ್ದು ಅವರ ಕಾಲಿನ ಸ್ನಾಯು ಮುರಿಯಿತು. ಅವರಿಗೆ ವೈದ್ಯರು 28 ದಿನಗಳ ಕಾಲ ವಿಶ್ರಾಂತಿ ಪಡೆಯಲು ಸಲಹೆ ನೀಡಿದರು.ಶಂಕರ್ ಅವರು ವಾರಕ್ಕೆ 50000 ರೂ.ಟಿಟಿಡಿ ಸೌಲಭ್ಯದೊಂದಿಗೆ ವೈಯಕ್ತಿಕ ಅಪಘಾತ ವಿಮೆಯನ್ನು ಹೊಂದಿದ್ದರು. ಅವರು ವಿಮಾ ಕಂಪನಿಯಿಂದ 2ಲಕ್ಷ ರೂ. ತನಕ ಕ್ಲೈಮ್ ಪಡೆಯಲು ಅರ್ಹರಾಗಿದ್ದಾರೆ.

**7. ರೋಗ ನಿರ್ದಿಷ್ಟ ವಿಮೆ:** ಈ ವಿಮಾ ಪಾಲಿಸಿಯು ಮಧುಮೇಹ, ಅಧಿಕರಕ್ತದೊತ್ತಡ, ಹೃದಯ, ಕೋವಿಡ್–19 ಅಥವಾ ಗಾಳಿಯಲ್ಲಿ ಹರಡುವ ಕಾಯಿಲೆಗಳಂತಹ ನಿರ್ದಿಷ್ಟ ರೋಗಗಳನ್ನು ಒಳಗೊಂಡಿರುತ್ತದೆ. ಇದು ನಿಗದಿತ ಮೊತ್ತದ ವಿಮೆಯನ್ನು ಒದಗಿಸುತ್ತದೆ ಮತ್ತು ನಿರ್ದಿಷ್ಟಪಡಿಸಿದ ರೋಗಕ್ಕೆ ಸಂಬಂಧಿಸಿದ ಆಸ್ಪತ್ರೆಗೆ ದಾಖಲು ಮತ್ತು ವೈದ್ಯಕೀಯ ವೆಚ್ಚಗಳನ್ನು ಒಳಗೊಂಡಿರುತ್ತದೆ.

ಸೂಕ್ತ ಆರೋಗ್ಯ ವಿಮಾ ಪಾಲಿಸಿಯನ್ನು ಆಯ್ಕೆ ಮಾಡಿಕೊಳ್ಳುವ ಉದ್ದೇಶದಿಂದ ಎಲ್ಲ ಏಳು ವಿಧದ ಯೋಜನೆಗಳನ್ನು ಇಲ್ಲಿ ಪಟ್ಟಿಮಾಡಲಾಗಿದೆ. ಯಾವುದು ಸೂಕ್ತ ಎಂಬುದನ್ನು ಆಯ್ಕೆಮಾಡಿಕೊಳ್ಳಬಹುದು:

| ಆರೋಗ್ಯ ವಿಮಾ ಯೋಜನೆ ವಿಧ | ಯಾರಿಗೆ ಸೂಕ್ತ? |
|---|---|
| ವೈಯಕ್ತಿಕ ಆರೋಗ್ಯ ವಿಮೆ | ವ್ಯಕ್ತಿಗಳಿಗೆ |
| ಕುಟುಂಬ ಆರೋಗ್ಯ ವಿಮೆ | ಇಡೀ ಕುಟುಂಬಕ್ಕೆ–ಸ್ವಂತಕ್ಕೆ, ಸಂಗಾತಿ, ಮಕ್ಕಳು ಮತ್ತು ಪಾಲಕರು |
| ಗಂಭೀರ ಕಾಯಿಲೆ ವಿಮೆ | ದುಬಾರಿ ಚಿಕಿತ್ಸೆಗೆ ಹಣ ಹೊಂದಿಸಲು |
| ಹಿರಿಯ ನಾಗರಿಕರ ಆರೋಗ್ಯ ವಿಮೆ | 60 ಮತ್ತು ಅದಕ್ಕಿಂತ ಮೇಲ್ಪಟ್ಟ ನಾಗರಿಕರಿಗೆ |
| ಸೂಪರ್ ಟಾಪ್–ಅಪ್ ಆರೋಗ್ಯ ವಿಮೆ | ಅತ್ಯಲ್ಪ ಮೊತ್ತದ ಪ್ರಿಮಿಯಂನಲ್ಲಿ ಹೆಚ್ಚುವರಿ ಆರೋಗ್ಯ ಸೌಲಭ್ಯ |
| ವೈಯಕ್ತಿಕ ಅಪಘಾತ ವಿಮೆ | ಅಪಘಾತದಿಂದ ಮರಣ, ಅಂಗವೈಕಲ್ಯ ಅಥವಾ ಆದಾಯ ನಷ್ಟ |
| ರೋಗ ನಿರ್ದಿಷ್ಟ ವಿಮೆ(ಗಾಳಿಯಲ್ಲಿ ಹರಡುವ, ಮಧುಮೇಹ, ಕ್ಯಾನ್ಸರ್, ಹೃದಯ, ಮಹಿಳೆಯರಿಗೆ ನಿರ್ದಿಷ್ಟವಾದ, ಕೊರೊನಾ ಕವಚ್ ಇತ್ಯಾದಿ) | ಸಾಂಕ್ರಾಮಿಕ ಪೀಡಿತ ಸ್ಥಿತಿಗಳಿಂದ ಬಳಲುತ್ತಿರುವವರು ಅಥವಾ ಅದಕ್ಕೆ ಗುರಿಯಾದವರಿಗೆ ಸೂಕ್ತವಾದುದು. |

**8. ಸೂಕ್ತ ಆರೋಗ್ಯ ವಿಮೆ ಯೋಜನೆ ಆಯ್ಕೆ:** ಸಾಮಾನ್ಯವಾಗಿ ಜನ ಮಾಡುವ ಬಹಳ ದೊಡ್ಡ ತಪ್ಪೆಂದರೆ ಒಂದು ಆರೋಗ್ಯ ವಿಮೆಯನ್ನು ಖರೀದಿ ಮಾಡಲು ವೈದ್ಯಕೀಯ ಜರೂರತ್ತು ಬರುವ ತನಕ ಕಾಯುವುದು. ಅನೇಕ ಮಂದಿ ವಿಮಾದಾರರಿಗೆ ಮೊದಲೇ ಅಸ್ತಿತ್ವದಲ್ಲಿರುವ ಆರೋಗ್ಯ ಸ್ಥಿತಿಗೆ ಸೌಲಭ್ಯವನ್ನು ನಿರಾಕ–ರಿಸಬಹುದು ಅಥವಾ ಹೆಚ್ಚುವರಿ ಕಾಯುವ ಅವಧಿಯನ್ನು ವಿಧಿಸಬಹುದು.

ಆರೋಗ್ಯ ವಿಮೆಯನ್ನು ಖರೀದಿಸಲು ಅತ್ಯುತ್ತಮ ಸಮಯವೆಂದರೆ ನೀವು ಆರೋಗ್ಯವಂತರಾಗಿರುವ ಅಥ–ವಾ ನಿಮಗೆ ಅಗತ್ಯ ಇಲ್ಲದೇ ಇರುವ ಸಂದರ್ಭ. ಆರೋಗ್ಯ ವಿಮೆ ಆಯ್ಕೆ ಮಾಡಿಕೊಳ್ಳುವಾಗ ನಿಮ್ಮ ವಯಸ್ಸು, ಆರೋಗ್ಯ ಸ್ಥಿತಿ, ಕುಟುಂಬದ ಗಾತ್ರ ಮತ್ತು ಬಜೆಟ್‌ನಂತಹ ಅಂಶಗಳನ್ನು ಪರಿಗಣಿಸುವುದು ಮುಖ್ಯ. ಜೊತೆಗೆ ನಾನಾ ಯೋಜನೆಗಳನ್ನು ಅವುಗಳ ಕವರೇಜ್, ಪ್ರಿಮಿಯಂಗಳು ಮತ್ತು ನೆಟ್‌ವರ್ಕ್ ಆಸ್ಪತ್ರೆಗಳ ಆಧಾರದಲ್ಲಿ ಇತರ ಯೋಜನೆಗಳ ಜೊತೆ ತುಲನೆ ಮಾಡಬಹುದು.

**ಬಾಟಮ್‌ಲೈನ್:** ಆರೋಗ್ಯ ಮತ್ತು ಹಣಕಾಸು ಯೋಗಕ್ಷೇಮದಅತ್ಯುತ್ತಮ ಹೂಡಿಕೆ ಎಂದರೆ ಅದು ಆರೋಗ್ಯ ವಿಮೆ. ಇಲ್ಲಿ ಲಭ್ಯವಿರುವ ನಾನಾ ವಿಧದ ಆರೋಗ್ಯ ವಿಮಾ ಪಾಲಿಸಿಗಳನ್ನು ಅರ್ಥಮಾಡಿಕೊಳ್ಳುವ ಮೂಲಕ ಮಾಹಿತಿಪೂರ್ಣ ನಿರ್ಧಾರ ಕೈಗೊಳ್ಳಬಹುದು ಮತ್ತು ನಿಮ್ಮ ಅಗತ್ಯಗಳಿಗೆ ಅನುಗುಣ ಯೋಜನೆ ಆಯ್ಕೆ ಮಾಡಿಕೊಂಡರೆ ನೀವು ನಿಶ್ಚಿಂತೆಯಿಂದ ಇದ್ದುಬಿಡಬಹುದು. ಆರೋಗ್ಯ ವಿಮೆ ಕೇವಲ ಖರ್ಚಿನ ಬಾಬತ್ತಲ್ಲ. ಇದು ಅನಿರೀಕ್ಷಿತ ವೆಚ್ಚಗಳಿಂದ ನಿಮ್ಮನ್ನು ರಕ್ಷಿಸುವ ರಕ್ಷಾ ಕವಚ.





ಈ ವಾರ್ತಾಪತ್ರದ ಸಂಕಲನ ಮಾಡುವ ಸಂದರ್ಭದಲ್ಲಿ ನಾವು ಎಲ್ಲ ರೀತಿಯ ಕಾಳಜಿ ಮತ್ತು ಎಚ್ಚರಿಕೆಯನ್ನು ವಹಿಸಿರುತ್ತೇವೆ. ಇಲ್ಲಿನ ಮಾಹಿತಿಗಳನ್ನು ಹಲವು ನಂಬಿಕೆಗೆ ಅರ್ಹವಾದ ಮೂಲಗಳಿಂದ ಪಡೆದಿರುತ್ತೇವೆ. ಆದರೆ, ಯಾವುದೇ ಮಾಹಿತಿಯ ಖಚಿತತೆ, ಅರ್ಹತೆ ಅಥವಾ ಪರಿಪೂರ್ಣತೆಯ ಬಗ್ಗೆ ಖಾತರಿಯನ್ನು ನೀಡುವುದಿಲ್ಲ. ಹಾಗಾಗಿ ಇಂತಹ ಮಾಹಿತಿ ಬಳಕೆಯಿಂದ ಆಗಬಹುದಾದ ಯಾವುದೇ ದೋಷ ಅಥವಾ ಲೋಪಗಳಿಗೆ ಜವಾಬ್ದಾರರಾಗಿರುವುದಿಲ್ಲ. ಈ ವಾರ್ತಾಪತ್ರದಲ್ಲಿ ತಿಳಿಸಲಾದ, ಚರ್ಚಿಸಲಾದ ಅಥವಾ ಶಿಫಾರಸ್ಸು ಮಾಡಲಾದ ಯಾವುದೇ ಯೋಜನೆಗಳಿಗೆ ಸಂಬಂಧಿಸಿದಂತೆ ಹೂಡಿಕೆ ಮಾಡುವ ಸಮರ್ಪಕತೆ ಬಗ್ಗೆ ಹೂಡಿಕೆದಾರರು ಸೂಕ್ತವಾದ ಹಣಕಾಸು ಸಲಹೆಗಳನ್ನು ಪಡೆಯಬೇಕು ಮತ್ತು ಭವಿಷ್ಯದ ನಿರೀಕ್ಷೆಗಳ ಬಗ್ಗೆ ನೀಡಿರುವ ಹೇಳಿಕೆಗಳು ಕಾರ್ಯರೂಪಕ್ಕೆ ಬರಬಹುದು ಅಥವಾ ಬಾರದೇ ಇರಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಮ್ಯೂಚುಯಲ್ ಫಂಡ್ ಹೂಡಿಕೆಗಳು ಯಾವತ್ತೂ ಮಾರುಕಟ್ಟೆಗೆ ಸಂಬಂಧಿಸಿದ ಅಪಾಯದ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಹಾಗಾಗಿ ಹೂಡಿಕೆ ಮಾಡುವುದಕ್ಕೂ ಮುನ್ನ ನಿಮಗೆ ನೀಡಲಾದ ದಾಖಲೆಗಳನ್ನು ದಯವಿಟ್ಟು ಅತ್ಯಂತ ಎಚ್ಚರಿಕೆಯಿಂದ ಓದಿಕೊಳ್ಳಿ. ಹಿಂದಿನ ನಿರ್ವಹಣೆಯ ಕೇವಲ ಸೂಚಕ ಉದ್ದೇಶವನ್ನು ಹೊಂದಿದ್ದು ಅದು ಯಾವುದೇ ಕಾರಣಕ್ಕೂ ಭವಿಷ್ಯದ ಮಾರ್ಗದರ್ಶಕವಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.

**ಇನ್‌ಸ್ಪೈರ್ ಇಂಡಿಯಾ ವೆಲ್ತ್ ಪ್ರೈ.ಲಿ.**
#65, ಸುರಾಸ ಎನ್‌ಕ್ಲೇವ್, ಮೊದಲ ಮಹಡಿ
ಪುಟ್ಟಣ್ಣ ರಸ್ತೆ, ಗಾಂಧಿ ಬಜಾರ್,
ಬಸವನಗುಡಿ, ಬೆಂಗಳೂರು -560004

**9035414414, 080-42129917**

info@inspireindiafs.com

**ಯಶಸ್ಸಿನ ಪ್ರೀತಿಯಲ್ಲಿ ಬೀಳದಿರಿ. ಯಶಸ್ಸನ್ನು ತರುವ ಅಭ್ಯಾಸಗಳ ಪ್ರೀತಿಯಲ್ಲಿ ಬೀಳಿ.**